ಕೈಯಿಂದ ಹಾಗೇ ಅವಳನ್ನು ಅಪ್ಪಿಕೊಳ್ಳುವ ಬಯಕೆ' ಆಗುತ್ತಿರುವಾಗ ನಡುವೆ ಅಪ್ಪಚ್ಚಿಯಾಗುವ ಐಸ್‌ಕ್ರೀಮಿನ ಅವಸ್ಥೆ ನೆನಪಾಗಿ, ತನ್ನಷ್ಟಕ್ಕೇ ನಕ್ಕು... ಯಾರಾದರೂ ಗಮನಿಸಿದರೇ ಎಂಬಂತೆ ಸುತ್ತಲೂ ನೋಡಿದವನಿಗೆ, ಬಳಿಯಲ್ಲಿದ್ದವಳು ಚಳಿಗೆ ಸಣ್ಣಗೆ ನಡುಗುವುದರ ಅರಿವಾಗಿ ತನ್ನ ಜರ್ಕಿನ್ ತೆಗೆದುಕೊಡುವವ.

**ಅವಳು**

'ಕೆಲವೇ ದಿನಗಳಲ್ಲಿ ಪಿಎಚ್‌.ಡಿ. ಮುಗಿಸಿ, ಹಾರಿಹೋಗುತ್ತೇನೆ ಎಂದು ಅರಿವಿದ್ದರೂ ಅದೇ ಪ್ರೀತಿಯಿಂದ ಎಕ್ಸ್‌ಪೆರಿಮೆಂಟ್‌ಗಳನ್ನು ಮಾಡುತ್ತಿದ್ದೀಯಲ್ಲೋ ಮುದುಕಾss ನಿನ್ನ ಕೈಕಾಲು ಕತ್ತರಿಸಿ, (ಸಣ್ಣವಳಿರುವಾಗ, ನವಿಲುಗರಿಯನ್ನು ಪುಸ್ತಕದ ಮಧ್ಯೆ ಬಚ್ಚಿಟ್ಟಂತೆ) ಬಚ್ಚಿಟ್ಟುಕೊಳ್ಳುತ್ತೇನೋ ನೋಡುತ್ತಿರು' ಎಂದುಕೊಂಡರೂ, ಅವನಿಗೆ ಒಳ್ಳೆ ನೌಕರಿ ಸಿಗಲೀ ದೇವರೇ ಎಂದು, ಬೆಳಗ್ಗೆ ಎದ್ದು ಮನೆದೇವರ ಮುಂದೆ ಕೈಮುಗಿದು ನಿಲ್ಲುವವಳು.

**ಅವನು**

'ಇಂಟ್ರಾವೇನಸ್ ಇಂಜೆಕ್ಷನ್ನಿನಂತೆ ಒಳಹೊಕ್ಕು ಆವರಿಸಿಬಿಟ್ಟಿದ್ದೀಯಲ್ಲೇ ಈ ಆರು ವರ್ಷಗಳಲ್ಲಿ. ನನ್ನ ಪಿಎಚ್‌.ಡಿ. ಆದಾಗ ತನ್ನದೇ ಆಯಿತು ಎಂಬಂತೆ ಖುಷಿಯಿಂದ ಪೇಡಾ ಹಂಚುತ್ತಿದ್ದಿಯಲ್ಲೇ.

ಕವನಗಳನ್ನು ಬರೆಯುತ್ತ, ಓದುತ್ತ, ಸದಾ ಕ್ರಿಯಾಶೀಲರಾಗಿಯೇ ಇದ್ದವರು. 1990ರ ದಶಕದಲ್ಲಿ 'ಮಯೂರ', 'ತುಷಾರ' ಮಾಸಿಕಗಳ ಓದುಗರಿಗೆ ಪರಿಚಿತ ಹೆಸರು ಅವರದು. ಉಲ್ಲಾಸರ ಒಟ್ಟೂ ಏಳು ಕತೆಗಳಿರುವ 'ಹಲವಾರು ಕಲರವಗಳ ಊರಗಾಥೆ' ಎಂಬ ಕಥಾಸಂಗ್ರಹವನ್ನು ಚಿಂತನ ಪ್ರಕಾಶನ 2005ರಲ್ಲಿ ಪ್ರಕಟಿಸಿತು. ಕತೆಗಾರ ಅಶೋಕ ಹೆಗಡೆ ಹೇಳುವಂತೆ, 'ಆತನ ಕತೆಗಳು ಕೂಡ ನಿರಂತರ ಪ್ರೀತಿಗೆ ಹಂಬಲಿಸುವ, ಎಲ್ಲರಿಗೂ ಒಳ್ಳೆಯದನ್ನು ಬಯಸುವ ಪ್ರಾರ್ಥನೆಗಳು'. ಹೌದು, ಉಲ್ಲಾಸರ ಕತೆಗಳೆಂದರೆ ಸೂಕ್ಷ್ಮ ಸಂವೇದನೆಯ ಸಂವಾದಗಳು. ಅಲ್ಲಿಯ ಪಾತ್ರಗಳು ದಿನನಿತ್ಯದ ಸಣ್ಣಪುಟ್ಟ ಸಡಗರಗಳನ್ನು ತೀವ್ರವಾಗಿ ಜೀವಿಸುವವರದು. ಬಾಳಿನ ಬಿನ್ನಾಣಗಳ ಸರಳ ಚಿತ್ರಣದಂತೆಯೇ ಅಲ್ಲಿ ನಮಗೆ ಒಂದು ಆರ್ತತೆ ಕಾಣಬರುತ್ತದೆ. ಓದುತ್ತಾ ಹೋದಂತೆ ನಸುನಗುವನ್ನು ಮೂಡಿಸುವ ಹಾಸ್ಯ, ತುಂಟತನ ಈ ಕತೆಗಳಲ್ಲಿ ಇವೆ. ಪ್ರೇಮ ಕತೆಗಳೆನ್ನಲು ಕಮ್ಮಿಯಾದರೂ, ಇಲ್ಲಿಯ ಕತೆಗಳಲ್ಲಿ ಪ್ರೀತಿ ಪ್ರೇಮ ಸ್ಥಾಯೀ ಭಾವ. ಭಾವಾತ್ಮಕತೆ ಎದ್ದು ತೋರುವ ಗುಣ. ಕತೆಯ ಪಾತ್ರಗಳು ಪ್ರೀತಿಯ ಹುಡುಕಾಟದಲ್ಲಿ ತೊಡಗಿರುವವರದೆ. ಈ ನವಿರು ನವಿರಾದ ಪ್ರೇಮಭಾವ ಮತ್ತು ದೈನಂದಿನ ಬದುಕಿನ ಕಾಠಿಣ್ಯಗಳನ್ನು ಎದುರಿಸಿದಾಗ ಆಗುವ ಘರ್ಷಣೆ ಇಲ್ಲಿನ ಕತೆಗಳ ಹಂದರ.

ಈ ಸಂಗ್ರಹದ ಕೊನೆಯ ಕತೆ, 'ಹಲವಾರು ಕಲರವಗಳ ಊರಗಾಥೆ'. ಇದು ಉಲ್ಲಾಸರ ಕೊನೆಯ ಕತೆ. ಅವರು ಅಷ್ಟು ಬೇಗ ಹೋಗಿರದಿದ್ದರೆ, ಅವರು ಕತೆಗಳು ಸಾಗಬಹುದಾಗಿದ್ದ ದಿಕ್ಕನ್ನು ಈ ಕತೆ ನಮಗೆ ದರ್ಶಿಸುತ್ತದೆ. ದಟ್ಟ ವಾಸ್ತವಿಕ ವಿವರಗಳು, ನವಿರು ಹಾಸ್ಯ, ಆತ್ಮೀಯ ಸಂವೇದನೆ ಈ ಕತೆಯ ವಿಶೇಷ. ಬಲು ಸರಳ ನಿರೂಪಣೆ, ಘಟನೆಗಳ ಸಾಂದ್ರತೆ ಈ ಕತೆಯನ್ನು ಸುಲಭಗ್ರಾಹ್ಯವಾಗಿಸಿದೆ. ಉಲ್ಲಾಸ ಹೆಗಡೆ ಮರೆಯಾಗುವ ಮುನ್ನ 'ನೀರು ಕುಡಿದ ದೋಣಿ' ಎಂಬ ಕಾದಂಬರಿ ಬರೆಯುತ್ತಿದ್ದರು. ಈ ಅಪೂರ್ಣ ಕೃತಿ ತುಂಬಾ ಭರವಸೆ ಮೂಡಿಸುವಂತಿತ್ತು. ಕಾಲ ಅಷ್ಟು ಬೇಗ ಅವರನ್ನು ಕರೆದುಕೊಂಡು ಹೋಗಿರದಿದ್ದರೆ ನಾವೆಲ್ಲ ಪ್ರೀತಿಯಿಂದ ಓದಲು ಬಯಸುವಂತಿದ್ದ ಅದೆಷ್ಟೋ ಕತೆಗಳು ಉಲ್ಲಾಸರಿಂದ ಬರುತ್ತಿದ್ದವು.

**● ಕಮಲಾಕರ ಕಡವೆ**